ಶ್ರೀ ಮದನಗೋಪಾಲ ನಾಯಕ್.—ಕೃಷ್ಣ ಮೇಲ್ದಂಡೆ ಯೋಜನೆಯಲ್ಲೂ ಸಹ ತಾವು ಕೂಲಂಕಷವಾಗಿ ವಿಚಾರಮಾಡಿ ಅಧಿಕಾರಿಗಳ ಮೇಲೆ ಕ್ರಮ ತೆಗೆದುಕೊಳ್ಳಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಎಚ್. ಡಿ. ದೇವೇಗೌಡ.—ಕೃಷ್ಣ ಮೇಲ್ದಂಡೆ ಯೋಜನೆಯಲ್ಲಿ ನಡೆದಿರತಕ್ಕಂತಹ ಅಕ್ರಮ, ಅವ್ಯವಹಾಗಳೇನಾದರೂ ಸನ್ಮಾನ್ಯ ಸದಸ್ಯರಿಗೆ ಗೊತ್ತಿದ್ದರೆ, ಈ ಸಭೆಯಲ್ಲೇ ಹೇಳಬೇಕೆಂದು ಹೇಳುವುದಿಲ್ಲ ಆಥವಾ ಬರವಣಿಗೆಯಲ್ಲಿ ಕೊಡಬೇಕೆಂದೂ ಹೇಳುವುದಿಲ್ಲ. ಓರಲ್ ಆಗಿ ಹೇಳಿದರೂ ಸಾಕು. ಯಾವ ಅಧಿಕಾರಿಯೇ ಇರಲಿ, ಯಾವ ಶ್ರೇಣಿಯ ಅಧಿಕಾರಿಯೇ ಇರಲಿ ಅದರ ಬಗೆ ಒಂದು ವಾರದಲ್ಲಿ ತನಿಖೆ ಮಾಡಿ ಈ ಸಭೆಯ ಮುಂದೆ ಅದನ್ನು ಮಂಡನೆ ಮಾಡುತ್ತೇನೆಂದು ಆಶ್ವಾಸನೆಯನ್ನು ಕೊಡುತ್ತೇನೆ.

ಶ್ರೀ ಧರ್ಮಸಿಂಗ್ ನಾರಾಯಣ ಸಿಂಗ್,—ಮಾನ್ಯ ಅಧ್ಯಕ್ಷರೆ, ಮಾನ್ಯ ಮಂತ್ರಿಗಳು ಹೇಳಿದರು, ಇದರ ಬಗ್ಗೆ ದೀರ್ಘವಾಗಿ ನಾನು ಚರ್ಚೆ ಮಾಡಲಿಕ್ಕೆ ಕೂಡ ಸಿದ್ಧರಾಗಿದ್ದೇವೆಂದು ಕಳೆದ ಅಧಿವೇಶನದಲ್ಲಿ ಕೃಷ್ಣ ಮೇಲ್ದಂಡೆ ಯೋಜನೆ ವಿಷಯವಾಗಿ ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರು ಪ್ರಶ್ನೆ ಎತ್ತಿದಾಗ ಈ ಸದನದಲ್ಲಿ ವಿವರವಾದ ಚರ್ಚೆಯಾಗಿದೆ. ಅದರ ಬಗ್ಗೆ ಸರ್ಕಾರದವರು ಯಾವ ಕ್ರಮ ತೆಗೆದುಕೊಂಡಿದ್ದಾರೆ ? ಎಷ್ಟರಮಟ್ಟಿಗೆ ದುಡ್ಡು ಖರ್ಚು ಮಾಡಿದ್ದಾರೆಂಬ ಬಗ್ಗೆ ಸಾಕಷ್ಟು ಪ್ರಶ್ನೆಗಳನ್ನು ಕೇಳಬೇಕಾಗುತ್ತದೆ. ಇದರ ಬಗ್ಗೆ ಎಲ್ಲಾ ಸದಸ್ಯರಿಗೂ ಕೂಡ ಸಮಾಧಾನಕರವಾದಂತಹ ಉತ್ತರ ಬೇಕಾಗಿದೆ. ಈ ವಿಷಯದ ಬಗ್ಗೆ ದೀರ್ಘ ಚರ್ಚೆಗೆ ಈ ಸದನ ಮುಗಿಯುವುದರೊಳಗೆ ಅವಕಾಶ ಮಾಡಿಕೊಡಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಎಸ್. ಎನ್. ಕಡಪಟ್ಟಿ.—ಅರ್ಧ ಗಂಟೆ ಚರ್ಚೆಗೆ ಅವಕಾಶ ಕೊಟ್ಟರೆ ಒಳ್ಳೆಯದು.

ಶ್ರೀ ಧರ್ಮಸಿಂಗ್ ನಾರಾಯಣ ಸಿಂಗ್.—ಉತ್ತರ ಕರ್ನಾಟಕ ಪ್ರದೇಶದಲ್ಲಿ ವಿಶ್ವಬ್ಯಾಂಕ್ ನೆರವಿನಿಂದ ಪ್ರಾಜೆಕ್ಟ್ ಯಾವಾಗ ಆಗುತ್ತದೆ ? ಇದಕ್ಕೆ ಎಷ್ಟು ಖರ್ಚಾಗಿದೆ ಎಂದು ತಿಳಿಸಿದರೆ, ಸಮಾಧಾನವಾಗುತ್ತದೆ. ಅಲ್ಲಿರತಕ್ಕಂತಹ ಶಾಸಕರು ಖುದ್ದಾಗಿ ನೋಡಿ ಈ ವಿಷಯವನ್ನು ಈ ಸಭೆಯಲ್ಲಿ ಎತ್ತಿದ್ದಾರೆ.

ಶ್ರೀ ಎಚ್. ಡಿ. ದೇವೇಗೌಡ,—ಮಾನ್ಯ ಅಧ್ಯಕ್ಷರೇ, ಸನ್ಮಾನ್ಯ ಸದಸ್ಯರಾದ ಶ್ರೀ ಧರ್ಮಸಿಂಗ್ ರವರು ಹೇಳಿದಂತೆ ವಿವರಣೆ ಕೊಡಬೇಕಾದುದು ಅವಶ್ಯಕ. ವಿಶ್ವಬ್ಯಾಂಕಿನ ನೆರವು ನಮಗೆ ಸಿಕ್ಕತಕ್ಕಂಥಾದ್ದು 117 ಕೋಟಿ ರೂಪಾಯಿಗಳು. ಈಗಾಗಲೇ ನಾವು ಉಪಯೋಗ ಮಾಡಿಕೊಂಡಿರುವುದು 97 ಕೋಟಿ ರೂಪಾಯಿಗಳು. ಉಳಿದದ್ದು 20 ಕೋಟಿ ರೂಪಾಯಿಗಳು. ಅದನ್ನು ಈ ವರ್ಷ ಉಪಯೋಗಮಾಡಿಕೊಳ್ಳುತ್ತೇವೆ. ಈಗ ಯು.ಕೆ.ಪಿ.ಗೆ ಖರ್ಚುಮಾಡಿರತಕ್ಕಂಥಾದ್ದು 360 ಕೋಟಿ ರೂಪಾಯಿಗಳು. ಈಗ ಕೃಷ್ಣ ಬೇಸಿನ್‌ನಲ್ಲಿ ಒಟ್ಟು ಖರ್ಚುಮಾಡಿರತಕ್ಕಂತಹ ಹಣ 704 ಕೋಟಿ ರೂಪಾಯಿಗಳು. ಯಾರಿಗೂ ತಪ್ಪು ಕಲ್ಪನೆ ಆಗುವುದು ಬೇಡವೆಂದು ಈ ವಿವರಣೆಯನ್ನು ಕೊಡುತ್ತಿದ್ದೇನೆ. ಬೇಸಿನ್‌ನಲ್ಲಿರತಕ್ಕಂತಹ ಘಟಪ್ರಭಾ ಒಂದು, ಎರಡು, ಹೊರತು 704 ಕೋಟಿ ರೂಪಾಯಿಗಳನ್ನು ಈ ಬೇಸಿನ್‌ನಲ್ಲಿ ಖರ್ಚುಮಾಡಿದ್ದೇವೆ. ಎಂದರೆ, ಒಂದು ಮತ್ತು ಎರಡು ಸ್ಟೇಜ್‌ಗಳಿಗೆ 65 ಕೋಟಿ ರೂಪಾಯಿಗಳನ್ನು ಖರ್ಚುಮಾಡಿದ್ದೇವೆ. ಒಟ್ಟು 769 ಕೋಟಿ ರೂಪಾಯಿಗಳನ್ನು ಈ ಬೇಸಿನ್‌ನಲ್ಲಿ ಖರ್ಚು ಮಾಡಿದ್ದೇವೆ. ಕಾವೇರಿ ಬೇಸಿನ್‌ನಲ್ಲಿ 330 ಕೋಟಿ ರೂಪಾಯಿಗಳನ್ನು ಮಾತ್ರ ಖರ್ಚು ಮಾಡಿರತಕ್ಕಂಥದ್ದು. ಇದರ ಬಗ್ಗೆ ತಮಗೆ ಸಂಶಯ ಬೇಡ. ಈ ವಿಷಯವನ್ನು ಚರ್ಚೆಗೆ ತೆಗೆದುಕೊಳ್ಳಲು ತಾವು ಸಿದ್ಧರಿದ್ದರೆ. ನಾನೂ ಅದಕ್ಕೆ ತಯಾರಾಗಿದ್ದೇನೆ. ಇದರ ಜೊತೆಗೆ ವಿರೋಧ ಪಕ್ಷದ ಎಲ್ಲಾ ಮಾನ್ಯ ಸದಸ್ಯರೂ ಕೂಡ ಈ ಯೋಜನೆ ನೋಡಿಕೊಂಡು ಬರಬೇಕೆಂದು ವಿನಂತಿಸುತ್ತೇನೆ. ಮತ್ತು ಅಲ್ಲಿರತಕ್ಕಂತಹ ದೋಷಗಳನ್ನು ಆ ಸ್ಥಳದಲ್ಲಿಯೇ ಹೇಳುವುದಾದರೆ, ಅದನ್ನು ಅಲ್ಲಿಯೇ ನನಗೆ ತಿಳಿಸುವುದಾದರೆ, ಅದರಲ್ಲಿರತಕ್ಕಂತಹ ದೋಷಗಳನ್ನು ಸರಿಪಡಿಸಲು ನನ್ನ ಶಕ್ತಿಮೀರಿ ಪ್ರಯತ್ನ ಮಾಡುತ್ತೇನೆಂದು ಈ ಸಭೆಯ ಮೂಲಕ ತಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

ವಿಷಯ.—ಅರಣ್ಯ ಅಭಿವೃದ್ಧಿಗಾಗಿ ಬಿಡಾಲಾದವರಿಗೆ ವಿಶೇಷ ರೀಯಾಯ್ತಿ.

ಪ್ರಶ್ನೆ ಸಂಖ್ಯೆ 28 (190) ಶ್ರೀ ಎಂ.ಎಸ್. ಕೃಷ್ಣನ್ (ರಾಜಾಜಿನಗರ).—ಈಕೆಳಕಂಡ ಪ್ರಶ್ನೆಗಳಿಗೆ ಮಾನ್ಯ ಶ್ರೀ ಅರಣ್ಯರಾಜ್ಯ ಮಂತ್ರಿಗಳು ದಯವಿಟ್ಟು ಉತ್ತರಿಸುವರೆ ?

(ಅ) ಕೆಲವು ಅರಣ್ಯ ಪ್ರದೇಶ ಕೂಪಗಳನ್ನು ಅರಣ್ಯ ಅಭಿವೃದ್ಧಿಗೋಸ್ಕರ ಹರಿಹರ ಪಾಳ್ಯೆಬರ್ ಸಂಸ್ಥೆಗೆ ಮತ್ತು ಬಿರ್ಲಾ ಕಂಪನಿಗಳಿಗೆ ಕೊಡಲಾಗಿದೆಯೆ ? ಹಾಗಿದ್ದಲ್ಲಿ ಯಾವ ಷರತ್ತುಗಳ ಮೇಲೆ ಈ ಪ್ರದೇಶಗಳನ್ನು ಕೂಪುಗಳನ್ನು ಕೊಡಲಾಗಿದೆ ;

ಆ) ಅಂತಹ ಕರಾರಿನಿಂದ ಸರ್ಕಾರಕ್ಕೆ ಆಗುವ ಲಾಭವೇನು ?

ಶ್ರೀ ಜೀವಿಜಯ(ಮಾನ್ಯ ಅರಣ್ಯ ರಾಜ್ಯ ಮಂತ್ರಿಗಳು).—

ಅ) ಅರಣ್ಯ ಅಭಿವೃದ್ಧಿಗೋಸ್ಕರ ಯಾವ ಅರಣ್ಯ ಪ್ರದೇಶಗಳನ್ನು—ಕೂಪುಗಳನ್ನು ಹರಿಹರ ಪಾಲಿಫೈಬರ್ ಸಂಸ್ಥೆಗೆ ಅಥವಾ ಬಿಲ್ಲು ಸಂಸ್ಥೆಗೆ ನೀಡಿಲ್ಲ. ಆದರೆ ಕರ್ನಾಟಕ ನೆಡುತೋಪು ನಿಗಮ ದೊಂದಿಗೆ ಸಹಭಾಗಿತ್ವ ಹೊಂದಿರುವ ಮತ್ತು 51 : 49ರ ಪ್ರಮಾಣದಲ್ಲಿ ಶೇರುಗಳನ್ನು ಹೊಂದಿರುವ ಮೆ. ಹರಿಹರ ಪಾಲಿಫೈಬರ್ಸ ಸಂಸ್ಥೆಗೆ 30,000 ಹೆಕ್ಟೇರುಗಳಷ್ಟು ಕೀಳು ದರ್ಜೆಯ ಅರಣ್ಯ ಪ್ರದೇಶ : 'ಸಿ' ಮತ್ತು 'ಡಿ' ತರಗತಿಯ ರೆವಿನ್ಯೂ ಜಮೀನುಗಳನ್ನು ಈ ಕೆಳಕಂಡ ನಿಬಂಧನೆಗಳಿಗನುಗುಣವಾಗಿ ಗುತ್ತಿಗೆಗೆ ನೀಡಲಾಗಿದೆ.

1) ಕಾರ್ಯ ನಿರ್ವಾಹಕ ಮಂಡಳಿಯು 7 ಮಂದಿ ನಿರ್ದೇಶಕರುಗಳನ್ನು ಹೊಂದಿರಬೇಕು. ಅವರಲ್ಲಿ 4 ಮಂದಿ ಸರ್ಕಾರಿ ನಿರ್ದೇಶಕರಾಗಿರಬೇಕು. ಮಂಡಳಿಯ ಅಧ್ಯಕ್ಷರು ಹಾಗೂ ಕಾರ್ಯ ನಿರ್ವಾಕ ನಿರ್ದೇಶಕರು ಸರ್ಕಾರಿ ಅಧಿಕಾರಿಗಳಾಗಿರಬೇಕು.

2) ಎಕರೆಗೆ 2 ಟನ್ನಿಗಿಂತ ಕಡಿಮೆ ಸೌದೆ : ನಾಟ ಇಳುವರಿ ಕೊಡುವ ಜಮೀನುಗಳನ್ನು ಮಾತ್ರ ಕೊಡಲಾಗುವುದು.

3) ಕಚ್ಚಾ ಮಾಲಿನ ಉತ್ಪತ್ತಿಯಿಂದ 87½ ಶೇಕಡ ಭಾಗವು ಸಹಭಾಗಿತ್ವದ ಕಂಪನಿಗೆ ಮತ್ತು ಉಳಿದ ಶೇಕಡ 12½ ಭಾಗವು ಸರ್ಕಾರಕ್ಕೆ ಗುತ್ತಿಗೆಯ ಹಣದ ಬದಲಾಗಿ ಸಂದಾಯವಾಗಬೇಕು. ಸಹ ಭಾಗಿತ್ವದ ಕಂಪನಿಯು ತನ್ನ ಖಾಸಗಿ ಪಾಲುದಾರನಿಗೆ ಕಟ್ಟಿಗೆಯನ್ನು ಚಾಲ್ತಿ ಮಾರುಕಟ್ಟೆಯ ದರದಲ್ಲಿ ನೀಡಬೇಕು.

4) ಮೆ. ಕರ್ನಾಟಕ ಪಲ್ಪ್‌ವುಡ್ ಸಂಸ್ಥೆಯು ಮೆ. ಹರಿಹರ ಪಾಲಿಫೈಬರ್ಸ್ ಸಂಸ್ಥೆಗೆ ನೀಡಲಾಗುವ ಕಚ್ಚಾ ಪ್ರಮಾಣದಷ್ಟೆ ಸರ್ಕಾರವು ಮೆ. ಹರಿಹರ ಪಾಲಿಫೈಬರ್ಸ್ ಸಂಸ್ಥೆಗೆ ಸರಬರಾಜು ಮಾಡಲು ಬದ್ಧವಾಗಿರುವ ಕಚ್ಚಾ ವಸ್ತುವಿನ ಪ್ರಮಾಣದಲ್ಲಿ ಕಡಿಮೆ ಮಾಡಿ ಕೊಳ್ಳಲಾಗುವುದು.

5) ಬೆಳೆಸುವ ಮರಗಳ ಶೇಕಡಾ 5ರಷ್ಟನ್ನು ಮೇವು ಕೊಡುವ ಮರಗಳ ಜಾತಿಗೆ ಮೀಸಲಾಗಿಡ ಬೇಕು. ಆ ಮೇವನ್ನು ಸ್ಥಳಿಯರಿಗೆ ಇಲಾಖೆಯು ನಿಗಧಿಪಡಿಸಿದ ದರಗಳಲ್ಲಿ ನೀಡಲಾಗುವುದು.

6) ಬೆಳೆಸುವ ಮರಗಳ ಶೇಕಡ 5ರಷ್ಟನ್ನು ಉರುವಲು ಕಟ್ಟಿಗೆಯ ಜಾತಿಗಳಿಗೆ ಮೀಸಲಾಗಿಡ ಬೇಕು. ಆ ಉರುವಲು ಕಟ್ಟಿಗೆಯನ್ನು ಸ್ಥಳೀಯ ಜನರಿಗೆ ಇಲಾಖೆಯು ನಿಗಧಿಪಡಿಸಿದ ದರದ ಮೇರೆಗೆ ನೀಡಲಾಗುವುದು. ಮೀಸಲಿಡಲಾದ ಜಾತಿಗಳಲ್ಲಿ ಉರುವಲು ಕಟ್ಟಿಗೆಯ ಮತ್ತು ಮೇವು ಕೊಡುವ ಜಾತಿಗಳು ಎರಡು ಇದ್ದಲ್ಲಿ ಅವುಗಳನ್ನು ಶೇಕಾಡ 5ರಷ್ಟಕ್ಕೆ ಮಿತಿಗೊಳಿಸಬೇಕು.

7) ರೆಂಬೆ, ಕೊಂಬೆ ಮತ್ತು ತೊಗಟೆಗಳನ್ನು (ಉತ್ಪತ್ತಿಯ ಶೇಕಡಾ 25ರಿಂದ 30ವರೆಗೂ ಹೋಗುವ) ಸುತ್ತು ಮುತ್ತಲಿನ ಹಳ್ಳಿಯ ಜನರು ಮುಫತ್ತಾಗಿ ತಲೆಹೊರೆಯ ಮೇಲೆ ತೆಗೆದು ಕೊಂಡು ಹೋಗಲು ಅನುವು ಮಾಡಿಕೊಡಬೇಕು.

8) ಬೆಳೆಸುವ ಮರಗಳ ಜಾತಿಯ ಆಯ್ಕೆ, ಅರಣ್ಯ ಇಲಾಖೆ ಸೇರಿದ್ದು :

ಆ) ಕರ್ನಾಟಕ ರಾಜ್ಯದಲ್ಲಿ ಸುಮಾರು 20 ಲಕ್ಷ ಹೆಕ್ಟೇರಿಗಳಿಗಿಂತಲೂ ಹೆಚ್ಚು ಬೆಂಗಾಡಾಗಿದ್ದು ಸಮಾಜಕ್ಕೆ ಅವುಗಳಿಂದ ಯಾವ ರೀತಿಯ ಪ್ರಯೋಜನವು ಆಗುತ್ತಿಲ್ಲ ಮತ್ತು ಮಣ್ಣಿನ ಸವಕಳಿಗೆ ಪ್ರವಾಹ ಮತ್ತು ಕಾಷ್ಮಕ್ಕೆ ಕಾರಣಗಳಾಗಿವೆ ಅಂಥಹ ಪ್ರದೇಶಗಳಲ್ಲಿ ಕೈಗಾರಿಕೆಗಳು ಸಸ್ಯಗಳನ್ನು ಬೆಳೆಸಲು ಮುಂದು ಬಂದಿರುವ ಸದವಕಾಶವನ್ನು ಉಪಯೋಗಿಸಿಕೊಳ್ಳುವುದು ಲಾಭಕರ. ಉತ್ಪತ್ತಿಯ ಒಂದು ಭಾಗ ಸಂಸ್ಥೆಗೆ ಹೋಗುವುದಾದರೂ ಆ ಭಾಗದಷ್ಟು ಕಚ್ಚಾ ಮಾಲನ್ನು ಸರ್ಕಾರವು ಸಂಸ್ಥೆಗೆ ಪೂರೈಸುವ ಪ್ರಮಾಣದಲ್ಲಿ ಕಡಿಮೆಯಾಗುತ್ತದೆ. ಜೊತೆಗೆ ಜನರ ಆರಣ್ಯೋತ್ಪನ್ನದ ಅವಶ್ಯಕತೆಯನ್ನು ಖರ್ಚಿಲ್ಲದೆ ಪೂರೈಸಲು ಸಾಧ್ಯವಾಗುವುದು.

ಶ್ರೀ ಎಂ.ಎಸ್. ಕೃಷ್ಣನ್.—ಮಾನ್ಯ ಅಧ್ಯಕ್ಷರೆ ಮಾನ್ಯಮಂತ್ರಿಗಳು ನೆಡುತೋಪು ನಿಗಮ ಎಂದು ಹೇಳಿದ್ದಾರೆ. ಆ ನಿಗಮಕ್ಕೆ ಎಷ್ಟು ಹಣವನ್ನು ಸರ್ಕಾರ ಹಾಕಿದೆ? ಎಷ್ಟು ಹಣವನ್ನು ಬಿಲ್ಲಾಗೆ ಸೇರಿದಂತಹ ಪಾಲಿಫೈಬರ್ಸ್ ಕಂಪನಿಗಳವರು ಹಾಕಿದ್ದಾರೆಂಬುದನ್ನು ಹೇಳುವುದಕ್ಕೆ ಸಾಧ್ಯವಿದೆಯೆ ?

ಶ್ರೀ ಬಿ.ಎ. ಜೀವಿಜಯ.—51 : 49ರ ರೇಷಿಯೋದಲ್ಲಿ 2 ಕೋಟಿ ರೂಪಾಯಿಗಳನ್ನು ನೀಡಿದ್ದೇವೆ. ಪೂರ್ಣ ಯೋಜನೆಗೆ 8ಕೋಟಿ ರೂಪಾಯಿಗಳಾಗುತ್ತವೆ.

ಶ್ರೀ ಎಂ.ಎಸ್. ಕೃಷ್ಣನ್,—ನಮ್ಮ ದೇಶದ ಅರಣ್ಯಗಳನ್ನು ಸಾಮಾಜಿಕವಾಗಿ ಉಪಯೋಗ ಮಾಡಿಕೊಳ್ಳಬೇಕಾಗಿದೆ. ಅರಣ್ಯಗಳನ್ನು ಖಾಸಗಿಯವರಿಗೆ ಕೊಟ್ಟರೆ ಅದು ವ್ಯಾಪಾರದೃಷ್ಟಿಯಿಂದ

ಕೊಟ್ಟಂತಾಗುತ್ತದೆ. ಅರಣ್ಯಗಳನ್ನು ಗುತ್ತಿಗೆಗೆ ಕೊಡತಕ್ಕದ್ದು ಏನಿದೆ ಅದನ್ನು ತಾವು ಮಾಡಕೂಡದು. ಇದರ ಬಗ್ಗೆ ಸ್ಪಷ್ಟವಾದ ನಿರ್ದೇಶನಗಳನ್ನಾಗಲೀ ಅಥವಾ ಸಲಹೆಗಳನ್ನು ಆಗಲಿ ಇವೊತ್ತಿನ ದಿವಸ ಕೊಟ್ಟಿಲ್ಲವೆ ? ಕೊಟ್ಟದ್ದರೆ ತಮ್ಮ ನೀತಿಗೆ ವಿರೋಧವಾದ ಕೆಲಸವನ್ನು ಮಾಡಿದಂತಾಗುವುದಿಲ್ಲವೆ ?

ಶ್ರೀ ಬಿ.ಎ. ಜೀವಿಜಯ.—ನಾವು ಯಾವುದೇ ಸಲಹೆ ಅಥವಾ ನಿರ್ದೇಶನಗಳನ್ನು ಕೊಟ್ಟಿಲ್ಲ. 1976ನೇ ಇಸವಿಯಲ್ಲಿ ಅಂದಿನ ಸರ್ಕಾರ ಅರಣ್ಯ ಇಲಾಖೆಯಲ್ಲಿ ನೀತಿಯನ್ನು ಸ್ವಲ್ಪ ಬದಲಾವಣೆ ಮಾಡ ಬೇಕೆಂದು ಆ ರೀತಿ ಮಾಡಿದ್ದಾರೆ. 1978ನೇ ಇಸವಿಯಿಂದ ಅದನ್ನು ಜಾರಿಗೆ ತಂದರು, ಆಗ ಈ ನೀತಿ ಯನ್ನು ದೂರದೃಷ್ಟಿ ಇಟ್ಟುಕೊಂಡು ಮಾಡಿದ್ದಾರೆಂದು ನನಗನ್ನಿಸುತ್ತದೆ. ಅರಣ್ಯ ಕಚ್ಚಾವಸ್ತುಗಳನ್ನು ಅವಲಂಬಿಸಿಕೊಂಡು ಇರತಕ್ಕ ಬಹಳಷ್ಟು ಕಾರ್ಖಾನೆಗಳಿವೆ. ಪ್ಲೇವುಡ್ ಫ್ಯಾಕ್ಟರಿಗಳು ಇರಬಹುದು. ಪಾಲಿಪೈಬರ್ಸ್ ಫ್ಯಾಕ್ಟರಿಗಳು ಇರಬಹುದು. ಈ ವಿಷಯ ಮಾನ್ಯ ಸದಸ್ಯರಿಗೆ ಗೊತ್ತಿರಬಹುದು, 2 ಲಕ್ಷದ 5 ಸಾವಿರ ಟನ್ ನೀಲಗಿರಿ ಮರಗಳನ್ನು ಒಪ್ಪಂದದ ಪ್ರಕಾರ ಪಾಲಿಪೈಬರ್ಸ್ ಫ್ಯಾಕ್ಟರಿಗಳಿಗೆ ಕೊಡಬೇಕಾಗಿತ್ತು, ಅಷ್ಟು ಮರಗಳನ್ನು ಕೊಡಲಿಕ್ಕೆ ಸಾಧ್ಯವಾಗುತ್ತಿಲ್ಲ. ಅದಕೋಸ್ಕರವಾಗಿ 1978ನೇ ಇಸವಿಯಲ್ಲಿ ಅಂದಿನ ಸರ್ಕಾರ ಒಂದು ತೀರ್ಮಾನವನ್ನು ತೆಗೆದುಕೊಂಡು ಪ್ರಥಮವಾಗಿ 30ಸಾವಿರ ಹೆಕ್ಟೇರ್ ಪ್ರದೇಶವನ್ನು ಮೈಸೂರು ಪೇಪರ್ ಮಿಲ್ಸ್‌ಗೆ ಕೊಟ್ಟದ್ದಾರೆ. 1980ನೇ ಇಸವಿಯಲ್ಲಿ ಕೇಂದ್ರ ಸರ್ಕಾರದ ಕನ್ಸರ್ವೇಶನ್ ಆಕ್ಟ್ ಬಂದಮೇಲೆ ಈ ರೀತಿ ಅರಣ್ಯಪ್ರದೇಶವನ್ನು ಕೊಡತಕ್ಕದ್ದರ ಬಗ್ಗೆ ಆ ಸರ್ಕಾರ ಯೋಚನೆ ಮಾಡಬೇಕಾಗಿತ್ತು. ಅಂದಿನ ತೀರ್ಮಾನದಂತೆ ಖಾಸಗಿಯವರಿಗೆ ಅರಣ್ಯ ಪ್ರದೇಶವನ್ನು ಕೊಡಲಿಕ್ಕೆ ನಿರ್ಧಾರ ಮಾಡಿದರು. 1984ನೆಯ ಇಸವಿಯಲ್ಲಿ ಕೇಂದ್ರ ಸರ್ಕಾರ ಕೆಲವು ನೀತಿಗಳನ್ನು ಅನುಸರಿಸಿ ಡಿಗ್ರೇಡೆಡ್ ಫಾರೆಸ್ಟ್ ಬಿಡುಗಡೆ ಮಾಡಬಹುದೆಂದು ಹೇಳಿದ್ದಾರೆ. ಕೈಗಾರಿಕೆ ಗಳಿಗೆ ಸಿ ಅಂಡ್ ಡಿ ಅರಣ್ಯಪ್ರದೇಶವನ್ನು ಕೊಟ್ಟು ಅವರಿಗೆ ಬೇಕಾದ ಕಚ್ಚಾಮಾಲು ಬೆಳೆದುಕೊಳ್ಳಲಿಕೆ ವ್ಯವಸ್ಥೆ ಮಾಡಬೇಕಾಗಿದೆ. ಪರಿಸರ ಈಗಾಗಲೇ ಸಾಕಷ್ಟು ಬದಲಾವಣೆಯಾಗಿದೆ. ಈಗಲೇ ಒಂದು ನೀತಿಯನ್ನು ಅನುಸರಿಸಿ ಕಚ್ಚಾವಸ್ತುಗಳನ್ನು ಬೆಳೆದುಕೊಳ್ಳಲು ಅವರಿಗೆ ಅರಣ್ಯ ಪ್ರದೇಶವನ್ನು ಕೊಡ ಬೇಕಾಗಿದೆ, ಸರ್ಕಾರದಿಂದ ಅವರಿಗೆ ಬೇಕಾದ ಕಚ್ಚಾವಸ್ತುಗಳನ್ನು ಪೂರೈಸುವುದಕ್ಕೆ ಸಾಧ್ಯವಿಲ್ಲ. ಈ ನೀತಿಯನ್ನು ಬಹುಶಃ 100–150ವರ್ಷಗಳ ದೃಷ್ಟಿಯಿಟ್ಟುಕೊಂಡು ಆ ನೀತಿಯನ್ನು ಅನುಸರಿಸಲಾಗಿದೆ. ಅದಕ್ಕೋಸ್ಕರ ನಮ್ಮ ರಾಜ್ಯದಲ್ಲಿ 22ಲಕ್ಷ ಹೆಕ್ಟೇರ್ ಕ್ಷೀಣಿಸಿದ ಅರಣ್ಯಪ್ರದೇಶವನ್ನು ಪರಿವರ್ತನೆ ಮಾಡಬೇಕಾದರೆ ನಮ್ಮ ಸರ್ಕಾರಕ್ಕೆ ಸಂಪನ್ಮೂಲದ ಕೊರತೆಯಿದೆ. ಕೈಗಾರಿಕೆಗಳವರು ಅವರ ಅವಶ್ಯಕತೆ ಗಳನ್ನು ಅವರೇ ಪೂರೈಸಿಕೊಳ್ಳಬೇಕಾಗುತ್ತದೆ. ಆ ದೃಷ್ಟಿಯಿಂದ ಈ ನೀತಿಯನ್ನು ಅಸುಸರಿಸಲಾಗಿದೆ ಇದು ಸರ್ಕಾರಕ್ಕೆ ವಿರೋಧವಾದ ನೀತಿಯಲ್ಲ. ಅರಣ್ಯಪ್ರದೇಶ ಪಶ್ಚಿಮ ಘಟ್ಟಗಳ ಕಡೆ ಅಲ್ಲ, ಎಲ್ಲಾ ಕಡೆಯೂ ನಶಿಸಿ ಹೋಗುತ್ತಿದೆ. ಇದು ಒಂದು ಪೂರಕವಾದ ಉದ್ದೇಶವೆಂದು ನಾನು ಹೇಳುತ್ತೇನೆ.

ವಿಷಯ.—ಮತಾಂತರ ಹೊಂದಿದ ಹರಿಜನ ಗಿರಿಜನರಿಗೆ ಮೀಸಲಾತಿ ಸೌಲಭ್ಯವನ್ನು ಮುಂದುವರೆಸುವುದು.

ಪ್ರ. ಸಂಖ್ಯೆ 29 (241) ಶ್ರೀ ಟಿ. ಎಸ್. ಮಣಿ (ಕೆ.ಜಿ.ಎಫ್.)—ಈ ಕೆಳಕಂಡ ಪ್ರಶ್ನೆಗಳಿಗೆ ಸಮಾಜ ಕಲ್ಯಾಣಮಂತ್ರಿಗಳು ದಯೆಯಿಟ್ಟು ಉತ್ತರಿಸುವರೆ ?

ಅ) ಕರ್ನಾಟಕದಲ್ಲಿ ಮಂತಾಂತರ ಹೊಂದಿದ ಹರಿಜನ ಗಿರಿಜನರಿಗೆ ಮೀಸಲಾತಿ ಸೌಲಭ್ಯಗಳಿವೆಯೇ?

ಆ) ಮತಾಂತರ ಹೊಂದಿದ ಹರಿಜನ ಗಿರಿಜನರಿಗೆ ತಮಿಳುನಾಡು, ಕೇರಳ ರಾಜ್ಯಗಳಲ್ಲಿ ಮೀಸ ಲಾತಿ ಸೌಲಭ್ಯಗಳನ್ನು ನೀಡಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ;

ಇ) ಮತಾಂತರ ಹೊಂದಿದ ಕೂಡಲೇ ಹರಿಜನ ಗಿರಿಜನರ ಸಾಮಾಜಿಕ, ಆರ್ಥಿಕ, ಹಿಂದುಳಿಯುವಿಕೆ ಮಾಯವಾಗುವುದಿಲ್ಲವಾದ್ದರಿಂದ ಅವರಿಗೆ ಮೀಸಲಾತಿ ಸೌಲಭ್ಯಗಳನ್ನು ನೀಡಲಾಗುವುದೆಂಬ ಆಶ್ವಾಸನೆ ಯನ್ನು ಸರ್ಕಾರದವರು ನೀಡುವರೇ ?

ಶ್ರೀ ವಿ.ಎಲ್. ಪಾಟೀಲ್ (ಸಮಾಜ ಕಲ್ಯಾಣ ಮಂತ್ರಿಗಳು) .—

ಅ) ಇವೆ.

ಆ) ಇಲ್ಲ.

ಇ) ಪರಿಶಿಷ್ಟ ವರ್ಗಗಳಿಗಿರುವ ಮೀಸಲಾತಿ ಮತ್ತಿತರ ಸೌಲಭ್ಯಗಳು, ಮತಾಂತರ ಹೊಂದಿದ ಪರಿಶಿಷ್ಟ ವರ್ಗಗಳಿಗೂ ಲಭ್ಯವಿದೆ. ಪರಿಶಿಷ್ಟ ಜಾತಿಗಳಿಗಿರುವ ಮೀಸಲಾತಿ ಮತ್ತಿತರ ಸೌಲಭ್ಯಗಳು ಮತಾಂತರ ಹೊಂದಿದ ಪರಿಶಿಷ್ಟ ಜಾತಿಗಳವರಿಗೆ ಲಭ್ಯವಿಲ್ಲ. ರಾಜ್ಯದಲ್ಲಿ ಕ್ರೈಸ್ತ ಮತಕ್ಕೆ ಮತಾಂತರ ಹೊಂದಿದ ಪರಿಶಿಷ್ಟ ಜಾತಿಯವರನ್ನು ಹಿಂದುಳಿದ ಜಾತಿಗಳೆಂದು ಪರಿಗಣಿಸಿ, ಹಿಂದುಳಿದ ಜಾತಿಗಳಿಗಿರುವ ಮೀಸಲಾತಿ ಮತ್ತಿತರ ಸೌಲಭ್ಯಗಳನ್ನು ನೀಡಲಾಗಿದೆ.